**ಕರ್ನಾಟಕ ವಿಧಾನ ಪರಿಷತ್ತು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 84 (103)
ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 27.01.2026
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚರಂಡಿ ವ್ಯವಸ್ಥೆಯು ತೀರಾ ಹದಗೆಟ್ಟಿದ್ದು, ಒಳಚರಂಡಿ ನೀರು ತೋಡಿನಲ್ಲಿ ಹರಿಯುವ ಮೂಲಕ ಮಹಾನಗರ ಪಾಲಿಕೆ ವ್ಯಾಪ್ತಿಯ ಪರಿಸರದ ಎಲ್ಲಾ ಬಾವಿಗಳ ನೀರು ಹಾಳಾಗಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಆರೋಗ್ಯದ ಮೇಲೆ ಉಂಟಾಗಿರುವ ಪರಿಣಾಮವನ್ನು ಮಹಾನಗರ ಪಾಲಿಕೆ ಯಾವ ಯಾವ ರೀತಿಯಲ್ಲಿ ನಿರ್ವಹಿಸುತ್ತಿದೆ; (ವಿವರ ಒದಗಿಸುವುದು) | ಮಂಗಳೂರು ನಗರದಲ್ಲಿ ಕೆಯುಐಡಿಎಫ್ ಸಿ ವತಿಯಿಂದ ವಿವಿಧ ಯೋಜನೆಗಳಡಿ ಒಳ ಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಯೋಜನೆಗಳ ವಿವರ ಈ ಕೆಳಕಂಡಂತಿದೆ:-<br>1. **ಸ್ಮಾರ್ಟ್ ಸಿಟಿ ಯೋಜನೆ:**<br>ಸ್ಮಾರ್ಟ್ ಸಿಟಿ ಯೋಜನೆಯಡಿ ಮಂಗಳೂರು ನಗರದಲ್ಲಿ ರೂ. **41.14** ಕೋಟಿ ಮೊತ್ತದಲ್ಲಿ ಒಳ ಚರಂಡಿ ಕಾಮಗಾರಿ ಕೈಗೊಂಡಿದ್ದು, ಎಲ್ಲಾ ಕಾಮಗಾರಿಗಳು ಮುಕ್ತಾಯಗೊಂಡಿದೆ. ಈ ಕಾಮಗಾರಿಯಲ್ಲಿ **39.00** ಕಿ.ಮೀ ಉದ್ದದ lateral line ಕೊಳವೆಗಳನ್ನು ಅಳವಡಿಸಲಾಗಿದ್ದು, **1782** ಆಳಗುಂಡಿಗಳನ್ನು ನಿರ್ಮಿಸಲಾಗಿದೆ ಹಾಗೂ **5160** ಮನೆ /ವಾಣಿಜ್ಯ ಮಳಿಗೆಗಳಿಗೆ ಒಳಚರಂಡಿ ಕೊಳವೆಗಳ ಸಂಪರ್ಕಗಳನ್ನು ಒದಗಿಸಲಾಗಿದೆ.<br>ಇದರ ಹೊರತಾಗಿ ವೆಟ್ ವೆಲ್ ನಿರ್ಮಾಣಕ್ಕಾಗಿ ಸ್ಮಾರ್ಟ್ ಸಿಟಿ ವತಿಯಿಂದ ರೂ. **14.26 ಕೋಟಿ** ಠೇವಣಿ ಮೊತ್ತವನ್ನು ಮಂಗಳೂರು ಮಹಾನಗರಪಾಲಿಕೆಗೆ ನೀಡಲಾಗಿದೆ. ಹೀಗಾಗಿ ಒಟ್ಟಾರೆ **ರೂ. 55.40 ಕೋಟಿ** ಸ್ಮಾರ್ಟ್ ಸಿಟಿ ಅನುದಾನವನ್ನು ಒಳಚರಂಡಿ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ.<br><br>2. **ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್):**<br>ಮಂಗಳೂರು ನಗರದಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ -1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕೆಯುಡಿಎಫ್ ಸಿ ವತಿಯಿಂದ ಕ್ವಿಮಿಪ್ ಯೋಜನೆಯಡಿ **8** ಒಳಚರಂಡಿ ಕಾಮಗಾರಿಗಳನ್ನು ರೂ. **316.49** ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾಮಗಾರಿಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>3. **ಜಲಶುದ್ಧಿ ಅಭಿಯಾನ ಕಾರ್ಯಕ್ರಮ:**<br>ಕೆಯುಐಡಿಎಫ್.ಸಿ ವತಿಯಿಂದ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿ (ಎನ್.ಜಿ.ಟಿ) ಹಾಗೂ ಸ್ವಚ್ಛ ಭಾರತ್ ಮಿಷನ್(ನ) 2.0 (ಎಸ್.ಬಿ.ಎಂ-2) ರಡಿ (ಬಳಸಿದ ನೀರು ನಿರ್ವಹಣೆ) ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| | | ಮಂಗಳೂರು ನಗರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು **ರೂ.40.00 ಕೋಟಿ**ಗಳ ಅನುದಾನ ಮಂಜೂರಾಗಿರುತ್ತದೆ.<br>ಅನುದಾನಕ್ಕೆ ಅನುಗುಣವಾಗಿ ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸಿದ್ದು ವಿಸ್ತೃತ ಯೋಜನಾ ವರದಿಯಲ್ಲಿ ಹಾನಿಗೊಳಗಾಗಿರುವ 8.17 ಕಿ.ಮೀ ಉದ್ದದ ಪೈಪ್ ಲೈನ್ ದುರಸ್ಥಿ ಕಾಮಗಾರಿ, ಎನ್.ಜಿ.ಟಿ ಮಾನದಂಡಗಳನ್ನು ಅನುಸರಿಸಲು ಪಚನಾಡಿಯಲ್ಲಿ ಪ್ರಸ್ತುತ ಇರುವ **8.75 ಎಂ.ಎಲ್.ಡಿ ASP Technology** ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು SBR Technology ಗೆ ಉನ್ನತೀಕರಿಸುವ ಕಾಮಗಾರಿ ಮತ್ತು ಬಜಾಲ್ ನಲ್ಲಿ ಪ್ರಸ್ತುತ ಇರುವ **20 ಎಂ.ಎಲ್.ಡಿ ASP Technology** ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ಕಾಮಗಾರಿ ಹಾಗೂ ಅತ್ತಾವರ ನಗರದ ಮನೆಗಳಿಂದ ಹೊರ ಬರುವ ತ್ಯಾಜ್ಯ ನೀರು ತೆರದ ಮಳೆ ನೀರಿನ ಗುಂಡಿಗೆ ಹರಿದು ನದಿ ನೀರನ್ನು ಸೇರಿ ನದಿ ನೀರು ಮಲಿನವಾಗುತ್ತಿರುವುದರಿಂದ ಸದರಿ ತ್ಯಾಜ್ಯ ನೀರನ್ನು, ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮಾಡಿ ಸದರಿ ವೆಟ್ ವೆಲ್‌ಗೆ ಸಾಗಿಸಿ ನಂತರ ಕಾವೂರ್ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಾಗಿಸುವಂತ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಸದರಿ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಆಹ್ವಾನಿಸಿ, ಗುತ್ತಿಗೆದಾರರಾದ M/s NBM Infratech Pvt. Ltd ರವರಿಗೆ ಕಾರ್ಯಾದೇಶ ಪತ್ರವನ್ನು ನೀಡಲಾಗಿದ್ದು, ಸರ್ವೇ ಕಾರ್ಯ ಪ್ರಗತಿಯಲ್ಲಿರುತ್ತದೆ.<br><br>NGT ಅನುದಾನದಡಿಯಲ್ಲಿ ಪಚ್ಚನಾಡಿ ಮತ್ತು ಬಜಾಲ್ ಸಂಸ್ಕರಣಾ ಘಟಕಗಳ ಮೇಲ್ದರ್ಜೆಗೇರಿಸುವ, ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮತ್ತು ಪಾಲಿಕೆಯ ವ್ಯಾಪ್ತಿಯಲ್ಲಿನ ಹಾನಿಗೊಂಡ 8.5 ಕಿ.ಮೀ ಹಳೆಯ ಮುಖ್ಯ ಒಳಚರಂಡಿ ಕೊಳವೆ ಮಾರ್ಗದ ಮರು ನಿರ್ಮಾಣದ ಕಾಮಗಾರಿ ಟೆಂಡರ್ ಹಂತದಲ್ಲಿರುತ್ತದೆ.<br><br>15ನೇ ಹಣಕಾಸು ಯೋಜನೆಯಡಿಯಲ್ಲಿ ಕಂಡತ್ ಪಳ್ಳಿ ವೆಟ್ ವೆಲ್ ನಿರ್ಮಾಣ, ಬಿಜೈ ಆನೆಗುಂಡಿ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.<br><br>ಜಲ್ ಹಿ ಅಮೃತ್ ಯೋಜನೆಯಡಿ STP ಗಳ ಉನ್ನತಿಕರಣಕ್ಕಾಗಿ 3.70 ಕೋಟಿಗಳು ಅನುಮೋದನೆಯಾಗಿದ್ದು, ಪ್ರಸ್ತುತ ಟೆಂಡರ್ ಹಂತದಲ್ಲಿರುತ್ತದೆ.<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ಜಾಲದಲ್ಲಿರುವ ಹಳೆಯ ಶಿಥಿಲಾವಸ್ಥೆಯಲ್ಲಿರುವ ಕೆಂಪು ಕಲ್ಲಿನ ಮಿಶಿನ್ ಹೋಲ್ ಹಾಗೂ ಸ್ಟೋನ್ ವೇರ್ ಪೈಪ್ ಗಳನ್ನು ಆರ್ ಸಿಸಿ ಮಿಶನ್ |

| | | |
|---|---|---|
| | | ಹೋಲ್ ಹಾಗೂ ಯು.ಪಿ.ವಿ.ಸಿ/ಆರ್ ಸಿಸಿ/ಡಿ.ಐ ಗೆ ಬದಲಾಯಿಸಲು ಹಾಗೂ ಒಳಚರಂಡಿ ರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಅಂದಾಜು ಮೊತ್ತ ರೂ. 1250.00 ಕೋಟಿ ಅವಶ್ಯಕತೆ ಇರುತ್ತದೆ. ಮುಂದೆ NGT ಗೆ ಸಂಬಂಧಪಟ್ಟಂತೆ ತ್ಯಾಜ್ಯಗಳನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರಿಗೆ ಒಳಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಮೇಲೆ ತಿಳಿಸಿದಂತೆ ಪ್ರಸ್ತಾವನೆಯನ್ನು ದಿನಾಂಕ 07.08.2025 ರಂದು ~~[illegible]~~ ಪೌರಾಡಳಿತ ನಿರ್ದೇಶಕರಿಗೆ ಸಲ್ಲಿಸಲಾಗಿರುತ್ತದೆ. |
| ಆ | ಮಂಗಳೂರು ನಗರದ ಹೃದಯ ಭಾಗದಲ್ಲಿರುವ ಕೊಡಿಯಾಲ್ ಬೈಲ್ ವೆಟ್‌ವೆಲ್(wetwell) ಕೊಳಚೆ ನೀರಿನ ಪೈಪುಗಳು ಒಡೆದು ಹೋದ ಕಾರಣದಿಂದ ಮಳೆ ನೀರು ಹರಿಯುವ ನೀರಿನ ತೋಡಿಗೆ ಬಿಟ್ಟಿರುವುದಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು) | ಕೊಡಿಯಾಲ್ ಗುತ್ತು ವೆಟ್‌ವೆಲ್ ನಿಂದ ಕುದ್ರೋಳಿ ವೆಟ್‌ವೆಲ್ ಗೆ ಸಂಪರ್ಕಿಸುವ ಪಂಪಿಂಗ್ ಕೊಳವೆ ಮಾರ್ಗವನ್ನು ಸುಮಾರು 25 ವರ್ಷಗಳ ಹಿಂದೆ ಅಳವಡಿಸಲಾಗಿದ್ದು ಸದರಿ ಕೊಳವೆಯು ಒಳಭಾಗದಲ್ಲಿ ಸವೆದು ಪದೇ ಪದೇ ಒಡೆದು ಹಾಳಾಗುತ್ತಿರುತ್ತದೆ ಇದರಿಂದಾಗಿ ದುರಸ್ತಿ ಕಾರ್ಯವನ್ನು ಕೈಗೊಳ್ಳುವುದು ಅಸಾಧ್ಯ ಪರಿಸ್ಥಿತಿ ಆಗಿರುತ್ತದೆ . ಈ ಸಂಬಂಧ ಹಳೆಯ 400 MM ಕೊಳವೆಯ ಬದಲಾಗಿ K9 DI 600 MM ಕೊಳವೆಯನ್ನು ಅಳವಡಿಸಲು ಅಂದಾಜು ಮೊತ್ತ ರೂ. 3,42,00,000.00 ಗಳಿಗೆ ತಯಾರಿಸಲಾಗಿದ್ದು ಆದ್ಯತೆ ಹಾಗೂ ಅನುದಾನದ ಲಭ್ಯತೆಯ ಮೇರೆಗೆ ಸದರಿ ಕಾಮಗಾರಿಯನ್ನು ತುರ್ತು ನೆಲೆಯಲ್ಲಿ ಕೈಗೊಳ್ಳಲಾಗುವುದು. |
| ಇ | ಕೊಡಿಯಾಲ್‌ಬೈಲ್ ವೆಟ್‌ವೆಲ್ ಕೊಳಚೆ ನೀರು ತೋಡುಗಳಲ್ಲಿ ಹರಿಯುವುದರಿಂದ ಆರೋಗ್ಯ ಮತ್ತು ಪರಿಸರದ ಮೇಲೆ ಉಂಟಾಗಿರುವ ಪರಿಣಾಮವನ್ನು ನಿವಾರಿಸಲು ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು) | |
| ಈ | ಪರಿಸರ ಮಾಲಿನ್ಯದಿಂದ ನಗರದ ಅನೇಕ ನಿವಾಸಿಗಳ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕುದ್ರೋಳಿ, ಪಾಂಡೇಶ್ವರ, ಕಡೇಕಾರ್ ಮತ್ತು ಕೊಡಿಯಾಲ್ ಗುತ್ತು ವೆಟ್‌ವೆಲ್ ಗಳ ಎಲೆಕ್ಟ್ರೋ ಮೆಕ್ಯಾನಿಕಲ್ ಉಪಕರಣಗಳನ್ನು ಮೇಲ್ದರ್ಜೆಗೇರಿಸಲು ಸ್ಮಾರ್ಟ್ ಸಿಟಿ ಅನುದಾನದಡಿಯಲ್ಲಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>NGT ಅನುದಾನದಡಿಯಲ್ಲಿ ಪಚ್ಚನಾಡಿ ಮತ್ತು ಬಜಾಲ್ ಸಂಸ್ಕರಣಾ ಘಟಕಗಳ ಮೇಲ್ದರ್ಜೆಗೇರಿಸುವ, ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮತ್ತು ಪಾಲಿಕೆಯ ವ್ಯಾಪ್ತಿಯಲ್ಲಿನ ಹಾನಿಗೊಂಡ 8.5 ಕಿ.ಮೀ ಹಳೆಯ ಮುಖ್ಯ ಒಳಚರಂಡಿ ಕೊಳವೆ ಮಾರ್ಗದ ಮರು ನಿರ್ಮಾಣದ ಕಾಮಗಾರಿ ಟೆಂಡರ್ ಹಂತದಲ್ಲಿರುತ್ತದೆ.<br><br>15ನೇ ಹಣಕಾಸು ಯೋಜನೆಯಡಿಯಲ್ಲಿ ಕಂಡತ್ ಪಳ್ಳಿ ವೆಟ್ ವೆಲ್ ನಿರ್ಮಾಣ, ಬಿಜೈ ಆನೆಗುಂಡಿ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ, ಎಕ್ಕೂರು ಪ್ರದೇಶಗಳಲ್ಲಿ ಮುಖ್ಯ ಕೊಳವೆ ಮಾರ್ಗದ ಮರು ನಿರ್ಮಾಣ ಕಾಮಗಾರಿಯನ್ನು ಪ್ರಸ್ತಾಪಿಸಲಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. |

| | | |
|---|---|---|
| | | ಜಲ್ ಹಿ ಅಮೃತ್ ಯೋಜನೆಯಡಿ STP ಗಳ ಉನ್ನತಿಕರಣಕ್ಕಾಗಿ 3.70 ಕೋಟಿಗಳು ಅನುಮೋದನೆಯಾಗಿದ್ದು, ಪ್ರಸ್ತುತ ಟೆಂಡರ್ ಹಂತದಲ್ಲಿರುತ್ತದೆ.<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ಜಾಲದಲ್ಲಿರುವ ಹಳೆಯ ಶಿಥಿಲಾವಸ್ಥೆಯಲ್ಲಿರುವ ಕೆಂಪು ಕಲ್ಲಿನ ಮಿಶಿನ್ ಹೋಲ್ ಹಾಗೂ ಸ್ಟೋನ್ ವೇರ್ ಪೈಪ್ ಗಳನ್ನು ಆರ್ ಸಿಸಿ ಮಿಶನ್ ಹೋಲ್ ಹಾಗೂ ಯು.ಪಿ.ವಿ.ಸಿ/ಆರ್ ಸಿಸಿ/ಡಿ.ಐ ಗೆ ಬದಲಾಯಿಸಲು ಹಾಗೂ ಒಳಚರಂಡಿ ರಹಿತ ಪ್ರದೇಶದಲ್ಲಿ ಒಳಚರಂಡಿ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಕುರಿತು ಪಾಲಿಕೆಯ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಉ | ಕೊಳಚೆ ನೀರು ನಿರ್ವಹಣೆಗೆ ಸ್ಮಾರ್ಟ್ ಸಿಟಿಯಲ್ಲಿ ಇಟ್ಟಿರುವ ಅನುದಾನವೆಷ್ಟು; ಕೊಳಚೆ ನೀರು ನಿರ್ವಹಣೆಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ಇಟ್ಟಿರುವ ಅನುದಾನವೆಷ್ಟು; ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕೊಳಚೆ ನೀರು ನಿರ್ವಹಣೆಗಾಗಿ ಕೈಗೊಂಡ ಯೋಜನೆಗಳು ಯಾವುವು; ವಿನಿಯೋಗಿಸಿದ ಹಣವೆಷ್ಟು; ಹಾಗೂ ಕಾಮಗಾರಿಗಳು ಯಾವುವು? (ವಿವರ ಒದಗಿಸುವುದು) | ಸ್ಮಾರ್ಟ್ ಸಿಟಿ ಯೋಜನೆಯಡಿ ಮಂಗಳೂರು ನಗರದಲ್ಲಿ ರೂ. **41.14** ಕೋಟಿ ಮೊತ್ತದಲ್ಲಿ ಒಳ ಚರಂಡಿ ಕಾಮಗಾರಿ ಕೈಗೊಂಡಿದ್ದು, ಎಲ್ಲಾ ಕಾಮಗಾರಿಗಳು ಮುಕ್ತಾಯಗೊಂಡಿದೆ. ಈ ಕಾಮಗಾರಿಯಲ್ಲಿ **39.00** ಕಿ.ಮೀ ಉದ್ದದ **lateral line** ಕೊಳವೆಗಳನ್ನು ಅಳವಡಿಸಲಾಗಿದ್ದು, **1782** ಆಳಗುಂಡಿಗಳನ್ನು ನಿರ್ಮಿಸಲಾಗಿದೆ. ಇದರ ಹೊರತಾಗಿ **5160** ಮನೆ /ವಾಣಿಜ್ಯ ಮಳಿಗೆಗಳಿಗೆ ಒಳಚರಂಡಿ ಕೊಳವೆಗಳ ಸಂಪರ್ಕಗಳನ್ನು ಒದಗಿಸಲಾಗಿದೆ.<br><br>ಇದರ ಹೊರತಾಗಿ ವೆಟ್ ವೆಲ್ ನಿರ್ಮಾಣಕ್ಕಾಗಿ ಸ್ಮಾರ್ಟ್ ಸಿಟಿ ವತಿಯಿಂದ ರೂ. **14.26 ಕೋಟಿ** ಠೇವಣಿ ಮೊತ್ತವನ್ನು ಮಂಗಳೂರು ಮಹಾನಗರಪಾಲಿಕೆಗೆ ನೀಡಲಾಗಿದೆ. ಕೊಳಚೆ ನೀರು ನಿರ್ವಹಣೆಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ಬಿಡುಗಡೆಯಾದ ರೂ.14.26 ಕೋಟಿಗಳ ಪೈಕಿ ಪ್ರಸ್ತುತ ಕುಂದ್ರೋಳಿ, ಪಾಂಡೇಶ್ವರ, ಕಡೇಕಾರ್ ಮತ್ತು ಕೊಡಿಯಾಲ್ ಗುತ್ತು ವೆಟ್‌ವೆಲ್‌ಗಳ ಎಲೆಕ್ಟ್ರೋ ಮೆಕ್ಯಾನಿಕಲ್ ಉಪಕರಣಗಳನ್ನು ಮೇಲ್ದರ್ಗೇರಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಪ್ರಸ್ತುತ ರೂ.12.96 ಕೋಟಿಗಳು ವೆಚ್ಚವಾಗಿರುತ್ತದೆ. |

**ಸಂಖ್ಯೆ: ನಅಇ 5 ಎಂಎಂಸಿ 2026 (ಇ)**

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು